ವರ್ಷಗಳ ಬದುಕು, ತಾಪಮಾನ ಮತ್ತು ಕಾಲಮಾನಗಳು ಹಿತಕರವಲ್ಲದ ಪ್ರದೇಶ. ಅಲ್ಲಿ ಪಿಯಾನೊ ಉಳಿಯಬೇಕಾದರೆ, ಅದರ ಶ್ರುತಿ ಸರಿಯಿರಬೇಕಾದರೆ, ಅದನ್ನು ನುಡಿಸಬೇಕಾದರೆ ಇರಬಹುದಾದ ಸವಾಲುಗಳೇ ಬೇರೆ. ಅಲ್ಲಿರುವ ಬಹುತೇಕರು ದೈಹಿಕ ಶ್ರಮದ ಬಿಡಾರಗಳಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ. ಬೇರೆ ಪ್ರಾಂತಗಳಿಂದ ಬಂದಿದ್ದಾರೆ. ಹೀಗಾಗಿ, ಅವರುಗಳ ನಡುವೆ ಸಿಕ್ಕ ಪಿಯಾನೊಕ್ಕೆ ಒಂದು ಆಳವಾದ ಕಥನವಿರುತ್ತದೆ. ಆ ಕಥನ ಆಗಿನ ಸಮಾಜ ಮತ್ತು ಸಂಸ್ಕೃತಿಗೊಂದು ಕನ್ನಡಿಯಾಗುತ್ತದೆ.

ಸೋಫಿ ಹೇಳುತ್ತಾರೆ: "ನಾನು ಎಂದಿಗೂ ನುಡಿಸದಿದ್ದ ವಾದ್ಯವನ್ನು ಹುಡುಕಿ ಇಂಗ್ಲೆಂಡಿನ ನನ್ನ ಮನೆಯಿಂದ ದೂರ ದೂರಕ್ಕೆ ಪ್ರಯಾಣ ಮಾಡಿದೆ. ಕಾರ್ಯಕಾರಣವು ಕೈಕೊಟ್ಟಿದ್ದು ಮುಖ್ಯವಾಗಲಿಲ್ಲ. 'ಎ' ಜಾಗದಿಂದ ನಾನು 'ಸಿ'ಗೆ ಪ್ರಯಾಣ ಬೆಳೆಸುವುದಕ್ಕೆ 'ಬಿ' ಹೇಳಿದ ಯಾವುದೋ ವಿಚಾರವೇ ಪ್ರೇರಕವಾಗಿರಬಹುದು. ನಿರೀಕ್ಷೆಗೆ ವಿರುದ್ಧವಾಗಿ ಸಾಗಬಹುದಾದ ಸೈಬೀರಿಯಾದ ಸಂದಿಗ್ಧತೆಗೆ ನನ್ನನ್ನು ಒಪ್ಪಿಸಿಕೊಂಡಿದ್ದೆ. ಈ ರೀತಿ ಹೇಳಲಾಗದ ಅನುಭವಗಳು ಮತ್ತು ಅನಿರೀಕ್ಷಿತ ಸಂಪರ್ಕಗಳೇ ವಿಶ್ವದ ಮಹಾನ್ ಕಥೆಗಳನ್ನು ನಿರೂಪಿಸುವ ರಾಷ್ಟ್ರಗಳನ್ನು ಕಟ್ಟುತ್ತವೆ. ಎಷ್ಟೋ ಬಾರಿ ಗೋಚರಿಸದ–ದಾಖಲಾಗದ ವಿಷಯವೇ ಎದುರಿಗಿರುವ ಲಿಖಿತ ಚರಿತ್ರೆಗಿಂತ ಮಹತ್ವದ ಸಂಗತಿಯನ್ನು ಹೇಳಿಬಿಡುತ್ತದೆ." ಈ ಮಾತನ್ನು ಕೇಳಿದಾಗ ಪುಸ್ತಕದ ಹೂರಣವೂ ಧಾಟಿಯೂ ನಮಗೆ ದಕ್ಕುತ್ತದೆ.

ಮತ್ತೊಂದು ವಿಚಾರ. ದಮನಕಾರಿ ನಿರಂಕುಶ ಪ್ರಭುತ್ವಗಳಿಗೂ ಕಲೆ ಸಂಸ್ಕೃತಿಗೂ ಎಣ್ಣೆ ಸೀಗೇಕಾಯಿಯ ಸಂಬಂಧವಿದೆಯೇ? ಕಲೆ ಎಲ್ಲರನ್ನೂ ಒಳಗೊಳ್ಳುವ ಸಮಾಹಿತಗೊಳಿಸುವ ಪ್ರಕ್ರಿಯೆಯಿಂದ ಹುಟ್ಟುತ್ತದೆ. ಕಲೆಯನ್ನು ಆಸ್ವಾದಿಸಲು ತಾಳ್ಮೆ ಬೇಕು. ಆದರೆ, ಭಿನ್ನಮತೀಯರನ್ನು ಶಿಕ್ಷೆಗೊಳಪಡಿಸುವಾಗ ಅವರ ಅವಶ್ಯಕ ಮಾನವ ಹಕ್ಕುಗಳಲ್ಲಿ ಊಟ ಬಟ್ಟೆಯ ಜೊತೆಗೆ ಸಂಗೀತ–ಕಲೆಗೂ ಜಾಗ ಮಾಡಿಕೊಡುವುದು ಊಹಿಸಲು ಕಷ್ಟವಾದ ಮಾತು. ಹಿಟ್ಲರ್ ಸಂಗೀತಪ್ರಿಯನಾಗಿದ್ದನಂತೆ. ಆದರೆ, ಅವನ ಆಳ್ವಿಕೆಯಲ್ಲಿ ಒಪ್ಪಿತವಾದ ಸಂಗೀತದ ಬಗ್ಗೆ ಸಂಗೀತಗಾರರ ಬಗ್ಗೆ ನಿಖರವಾದ ನಿಯಮಗಳಿದ್ದವು ಎಂದು ಡಿಲೋರಾ ನ್ಯುಷ್ವಾಂಡರ್ ತಮ್ಮ ಸಂಶೋಧನಾ ಲೇಖನದಲ್ಲಿ ಹೇಳುತ್ತಾರೆ. ತಾಲಿಬಾನಿಗಳಿಗೆ ಸಂಗೀತ ನಿಷಿದ್ಧ. ಸೈಬೀರಿಯಾದ ಶ್ರಮಿಕ ಬಿಡಾರಗಳ ಸಮೂಹದಲ್ಲಿ ಸಂಗೀತ ಮತ್ತು ದೊಡ್ಡ ಗಾತ್ರದ ಪಿಯಾನೊಗೆ ತನ್ನದೇ ಕಥೆಯಿದೆ.

ರಷ್ಯಾಕ್ಕೆ–ಸೈಬೀರಿಯಾಕ್ಕೆ ಸೇರದ, ಪಾಶ್ಚಾತ್ಯ ಪ್ರಾಂತದಿಂದ ಆಮದಾದ ಈ ಸಂಗೀತವಾದ್ಯ ಸ್ಥಳೀಯಗೊಂಡು ಸಂಸ್ಕೃತಿಗೆ ಒಗ್ಗಿದ್ದೂ ಒಂದು ಆಸಕ್ತಿಯ ಕಥೆ. ಒಂದು ಪಿಯಾನೊ, ಅದನ್ನು ತಯಾರಿಸಲು ಬೇಕಾದ ಮರ ಮತ್ತು ಇತರ ಪರಿಕರಗಳು, ಸೈಬೀರಿಯಾದ ತಾಪಮಾನಕ್ಕೆ ಒಗ್ಗಿ ನಿಲ್ಲಬಹುದಾದ ಸಾಧ್ಯತೆ, ಅದನ್ನು ಶ್ರುತಿ ಮಾಡಲು ಬೇಕಾದ ತಂತ್ರಜ್ಞರು, ನುಡಿಸುವುದನ್ನು ಕಲಿಸುವ ಗುರುಗಳು, ಕಲಿಯಬೇಕೆನ್ನುವ ಹಂಬಲದ ಶಿಷ್ಯರು ಮತ್ತು ಕಲಾವಿದರು ನುಡಿಸಿದ್ದನ್ನು ಆಸ್ವಾದಿಸುವ ಜನತೆ. ಹೀಗೆ, ಒಂದು ಪಾಶ್ಚಾತ್ಯ ವಾದ್ಯ ಸ್ಥಳೀಯಗೊಳ್ಳುವುದು ಸಹಜವಾದ ಪ್ರಕ್ರಿಯೆಯೇನೂ ಅಲ್ಲ. ಪಿಟೀಲು ನಮ್ಮದಲ್ಲದಿದ್ದರೂ ಅದು ಎಷ್ಟು ಸಹಜವಾಗಿ ಭಾರತೀಯ ಸಂಗೀತದಲ್ಲಿ ಸೇರಿಹೋಗಿದೆ ಎಂದರೆ ಅದು ಪಾಶ್ಚಾತ್ಯ ಎನ್ನುವುದನ್ನು ನಾವು ಗಮನಿಸುವುದೇ ಇಲ್ಲ. ಅದೇ ಗಿಟಾರು ಎಲ್ಲೆಲ್ಲೂ ಕಂಡರೂ, ನಮ್ಮ ಶಾಸ್ತ್ರೀಯ ಸಂಗೀತದಲ್ಲಿ ಒಂದು ಪ್ರಾಯೋಗಿಕ ವಾದ್ಯವಾಗಿ ಉಳಿದಿದೆಯೇ ಹೊರತು ಸ್ಥಾಯಿಯಾಗಿ ಉಳಿದಿಲ್ಲ. ಪಿಯಾನೊ ಕೂಡ ಹಳೆಯ ಹಿಂದಿ ಸಿನಿಮಾಗಳಲ್ಲಿ ನಾಯಕ–ನಾಯಕಿಯನ್ನು ಆಕರ್ಷಿಸಲು ಹಾಡಿನ ಜೊತೆಗೆ ನುಡಿಸುವ ವಾದ್ಯವಾಗಿತ್ತೇ ಹೊರತು, ಅದು ನಮ್ಮ ಸಂಸ್ಕೃತಿಯಲ್ಲಿ ಅಡಕವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಸೈಬೀರಿಯಾದ ಶೋಧ ಹೆಚ್ಚಿನ ಮಹತ್ವವನ್ನು ಪಡೆಯುತ್ತದೆ. ಇದಕ್ಕೆ ಮುಖ್ಯ ಕಾರಣ ಬಹುಶಃ ಕ್ಯಾಥರೀನ್ ದ ಗ್ರೇಟ್ ಸಮಯದ ಆಳ್ವಿಕೆಯಲ್ಲಿ ಪಾಶ್ಚಾತ್ಯ ಭಾಷೆ, ಸಾಹಿತ್ಯ ಸಂಗೀತಕ್ಕೆ ಮತ್ತು ಆಧುನೀಕರಣಕ್ಕೆ ಸಿಕ್ಕ ಪ್ರೋತ್ಸಾಹವೇ ಇರಬಹುದು.

ಸೈಬೀರಿಯಾ ದುರ್ಗಮ ಪ್ರದೇಶ ಹೌದು. ಅಲ್ಲಿ ಶಿಕ್ಷೆಗೆ ಒಳಗಾದ ಭಿನ್ನಮತೀಯರ ಶ್ರಮಿಕ